ಸಾಕ್ಷಿಯನ್ನು ದಿ: 12.03.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ತಂದೆಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಂದೆ 4 – 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ದಾವಾ ಆಸ್ತಿ ಈಗ ನನ್ನ ಹೆಸರಿಗೆ ಇರುತ್ತದೆ. ದಾವಾ ಸ್ವತ್ತನ್ನು ಹದ್ದುಬಸ್ತು ಮಾಡಿಸಿರುತ್ತೇನೆ. ಹದ್ದುಬಸ್ತು ಮಾಡಿದ ಕುರಿತು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ತಂದೆ ದಾವಾ ಆಸ್ತಿಯನ್ನು ಶಿವಪ್ಪನಿಂದ ಖರೀದಿ ಮಾಡಿರುತ್ತಾರೆ. ಸರ್ವೆ ನಂ.51 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣವಿತ್ತು ಗೊತ್ತಿಲ್ಲ. ಸರ್ವೆ ನಂ.51 ರಲ್ಲಿ ಒಟ್ಟು 1 ಎಕರೆ 4 ಗುಂಟೆ ಆಸ್ತಿಯಿತ್ತು ಎಂದರೆ ಗೊತ್ತಿಲ್ಲ. ಪುಟ್ಟಮಾದಶೆಟ್ಟಿಗೆ ಎಷ್ಟು ಜಮೀನಿದೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಯಾರಿದ್ದಾರೆಂದು ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಹಳ್ಳ ಬರುತ್ತದೆ ಎಂದರೆ ಸರಿ. ಸದರಿ ಹಳ್ಳದಿಂದ ರೈತರು ಪಂಪ್ ಸೆಟ್ ಮೂಲಕ ತಮ್ಮ ಜಮೀನುಗಳಿಗೆ ನೀರನ್ನು ತೆಗೆದುಕೊಂಡು ಹೋಗಿರುತ್ತಾರೆಂದರೆ ಗೊತ್ತಿಲ್ಲ. ನನ್ನ ಜಮೀನು ಇಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.51 ರಲ್ಲಿ ನನ್ನ ತಂದೆ ಹೊರತು ಪಡಿಸಿ ಇನ್ಯಾರು ಜಮೀನನ್ನು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. 1991 ರಲ್ಲಿ ಶಿವಣ್ಣ ಎಂಬ ವ್ಯಕ್ತಿಯು ನಂಜೇಗೌಡನದೊಡ್ಡಿ ಶಿವಪ್ಪನಿಂದ ಪೈಪ್ ಲೈನ್ ತೆಗೆದುಕೊಂಡು ಹೋಗುವ ಸಲುವಾಗಿ 1 ½ ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. 1994 ರಲ್ಲಿ 10 ಗುಂಟೆ ಜಮೀನನ್ನು ಚನ್ನಬಸಮ್ಮ ನಂಜೇಗೌಡನದೊಡ್ಡಿ ಶಿವಪ್ಪನಿಂದ ಪೈಪ್ ಲೈನ್ ತೆಗೆದುಕೊಂಡು ಹೋಗುವ ಸಲುವಾಗಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. 1995 ರಲ್ಲಿ 1 ಗುಂಟೆ ಜಮೀನನ್ನು ಪ್ರತಿವಾದಿಯು ನಂಜೇಗೌಡನದೊಡ್ಡಿ ಶಿವಪ್ಪನಿಂದ ತನ್ನ ಸರ್ವೆ ನಂ.170/4 ಮತ್ತು 175/5 ರ ಜಮೀನಿಗೆ ಪೈಪ್ ಲೈನ್ ತೆಗೆದುಕೊಂಡು ಹೋಗುವ ಸಲುವಾಗಿ ಮತ್ತು ಮಷೀನ್ ಮನೆ ಮಾಡುವ ಸಲುವಾಗಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ ತಾನು ಖರೀದಿ ಮಾಡಿದ ಜಮೀನಿನಲ್ಲಿ ಪೈಪ್ ಲೈನ್ ಅಳವಡಿಸಿಕೊಂಡು 1995 ರಿಂದಲೂ ತನ್ನ ಜಮೀನಿಗೆ ನೀರನ್ನು ಹಾಯಿಸಿಕೊಳ್ಳುತ್ತಿದ್ದ

ಎಂದರೆ ಸರಿಯಲ್ಲ. 1998 ರಲ್ಲಿ 2 ಗುಂಟೆ ಜಮೀನನ್ನು ಲಿಂಗಶೆಟ್ಟಿಯು ನಂಜೇಗೌಡನದೊಡ್ಡಿ ಶಿವಪ್ಪನಿಂದ ಪೈಪ್ ಲೈನ್ ತೆಗೆದುಕೊಂಡು ಹೋಗುವ ಸಲುವಾಗಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. 2000 ರಲ್ಲಿ 1 ಗುಂಟೆ ಜಮೀನನ್ನು ಚಿಕ್ಕಮಾದಯ್ಯನು ನಂಜೇಗೌಡನದೊಡ್ಡಿ ಶಿವಪ್ಪನಿಂದ ಪೈಪ್ ಲೈನ್ ತೆಗೆದುಕೊಂಡು ಹೋಗುವ ಸಲುವಾಗಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. 2006 ರಲ್ಲಿ ನನ್ನ ತಂದೆ ಉಳಿದ ಜಮೀನಾದ 27 ¼ ಗುಂಟೆಯನ್ನು ಶಿವಪ್ಪನಿಂದ ಖರೀದಿ ಮಾಡಿರುತ್ತಾರೆಂದರೆ ಸರಿ. ನಾನು ಪೈಪ್ ಲೈನ್ ಗಾಗಿ ಖರೀದಿ ಮಾಡಿದ ಜಮೀನನ್ನು ಸಹ ಉಳುಮೆ ಮಾಡಿಕೊಂಡು ಸುಳ್ಳು ಚೆಕ್ಕುಬಂದಿ ನಮೂದು ಮಾಡಿ ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಪ್ರತಿವಾದಿ ಹಾಗೂ ಶಿವಣ್ಣನ ಜಮೀನನ್ನು ಸಹ ಸೇರಿಸಿಕೊಂಡು ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾವು ಪ್ರತಿವಾದಿಯ ಜಮೀನನ್ನು ಸೇರಿಸಿಕೊಂಡು ಸುಳ್ಳು ಚೆಕ್ಕುಬಂದಿ ನಮೂದು ಮಾಡಿ ಈ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿಯು ತಾನು ಖರೀದಿ ಮಾಡಿದ ಆಸ್ತಿಯಲ್ಲಿ ಪೈಪ್ ಲೈನ್ ಅಳವಡಿಸಿಕೊಂಡು ಹೋಗಲು ನಾನು ತೊಂದರೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನೇ ಪ್ರತಿವಾದಿಗೆ ತೊಂದರೆಕೊಟ್ಟಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿ ನಡಕಲುಪುರ ಗ್ರಾಮದಲ್ಲಿದೆ ಎಂದು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ. ನಾನು ಪೋಲೀಸರಿಗೆ ಲಿಂಗಣಾಪುರದಲ್ಲಿ ನನ್ನ ಜಮೀನು ಬರುತ್ತದೆ ಎಂದು ಸುಳ್ಳು ಮಾಹಿತಿ ನೀಡಿರುತ್ತೇನೆಂದರೆ ಸರಿಯಲ್ಲ. ನಾನೇ ಪ್ರತಿವಾದಿಗೆ ತೊಂದರೆ ಕೊಟ್ಟು ಅವರ ವಿರುದ್ದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ